Regd No B G. 155 Sri 23—9—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು : ಅಂಮಸೆ ಸಿಂಸ್ಥೆದಾರ್ ಎಂ ವಿ. ಸುಬ್ಬರಾಯರು [2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಪೈ

Protect the Cow
ಗೋಸಂರಕ್ಷಣೆ ಮಾಡಿ

ಪೂರ್ಣ ಗುಣವಾಗದಿದ್ದಲ್ಲಿ ಹಣ ವಾಪಸ್

ಕೇವಲ 15 ದಿನಗಳಲ್ಲಿ ಪುರುಷತ್ವಕ್ಕೆ ಗೆಯಾತ್ರಿಯಾದ ಯುವನದಲ್ಲಿಯೇ ಮುಖ್ಯಾಂತೆ ಭಾಸವವರು ಮುಖ್ಯ ಸಂಸಾರದಲ್ಲಿ ಜಿಗುಪ್ಸೆ ಹೊಂದಿದವರು ಇಂದೇ ಡಾ || ಮೋತಿಯವರ ಸಲಹೆ ಪಡೆಯಿರಿ.

ಇವರು ನರಗಳ ದೌರ್ಬಲ್ಯ, ಅತಿ ಮೂತ್ರ, ಸ್ವಪ್ನಾವಸ್ಥೆ, ಸ್ತ್ರೀಯರ ಋತುಸಾತ್ರವದ ತೊಂದರೆ ಮತ್ತು ಇದೇ ರೀತಿಯ

ಜನತಾ ಡಿಸ್ಪೆನ್ಸರಿ

ಸಲಹೆ ಕಾಲ { ಬೆಳಿಗ್ಗೆ 10 ರಿಂದ 1
ಪ್ರತಿ ದಿನವೂ { ಸಂಜೆ 4 ರಿಂದ 8

ಹೆಡ್ ಆಫೀಸ್ :
ಸರ್ದಾರ್ ಚಕ್ರಂ ರೋಡ್
ಬೆಂಗಳೂರು 9 ಫೋನ್ ನಂಬ್ರ 75332

ನವದೆಹಲಿ — ಮೆಹಸಾನಾ ಜಿಲ್ಲೆಯ ಕಟೋಸಾನ ಗ್ರಾಮದಲ್ಲಿ ಮೊಗಲ ಕಾಲದ ಚಕ್ರವರ್ತಿ ಜಹಾಂಗೀರ್, ಷಹಜಹರ್ ಪುತ್ರ ಔರಂಗಜೇಬರು ಚಲಾವಣೆಗೆ ತಂದ 43 ಬೆಳ್ಳಿ ನಾಣ್ಯಗಳು ದೊರಕಿವೆ.

ಮಧ್ಯಪ್ರದೇಶದ ಪೂರ್ವನಿವಾಡ ಜಿಲ್ಲೆಯಲ್ಲಿ 5 ನೇ ಶತಮಾನಕ್ಕೆ ಸೇರಿದ ಏಳು ಬುದ್ಧನ ಕಂಚಿನ ಪ್ರತಿಮೆಗಳು ದೊರಕಿವೆ.

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪಶ್ಯಕೃಷ್ಣ ಜೋಯಿಸರಿಂದ

24 ಗುರುವಾರ ಕದಿಗೆ ಆಶ್ವಿನ
ಸಂಕಷ್ಟ ಚತುರ್ಥಿ

ರಂಗಾ ಹೇಳಿಕೆ

ಹೈದರಾಬಾದು — ವಿಶ್ವವ್ಯಾಪಕ್ಕೂ ನಷ್ಟದ ಖರ್ಚಿನ ಕಡಮೆಗೂ ಭಾರತದ ವಿದೇಶ ನೀತಿ ಬದಲುಗೊಳ್ಳಬೇಕೆಂದು ಸ್ವತಂತ್ರ ಪಾರ್ಟಿ ಅಧ್ಯಕ್ಷ ಶ್ರೀ ರಂಗಾರವರು ಹೇಳಿದರು — ಧಾನ್ಯ ಉತ್ಪಾದಕರ್ಯಾರೂ ದಾಸ್ತಾನಿನ ಅಪಾದಿತರಲ್ಲ, ಸಂಕಾಂವೇ ಭಾರಿ ಅಸ್ತಾನುದಾರ ; ಅದು ಎಲ್ಲ ಅವಘಡ ಧಾನ್ಯ ಹೊಂದಿಡ್ಡು ಸಮಯಕ್ಕೆ ಸರಿಯಾಗಿ ಬಿಡಗಡೆ ಮಾಡುವ ಅಭಾವ ಪರಿಸ್ಥಿತಿ ಸೃಷ್ಟಿಸುತ್ತಿದೆ ಎಂದೂ ಹೇಳಿದರು — ನಮ್ಮ ದೇಶವನ್ನು ಖುಲಿಮಾಡವರೆಗೆ ಚೀಣಾದೊಡನೆ ಯಾವ ವ್ಯವಹಾರವೂ ಕೂಡದೆಂದರು — ಚಿನ್ನದ ಹತೋಟಿ ಹೋಗಿ ಚಿನ್ನವು ಕೆಲವರಿಗೆ ಸ್ವತಂತ್ರ ರಕ್ಷಣೆಯಾಗಬೇಕೆಂದರು.

★

ಪಾಕಾ — ವಿದ್ಯಾರ್ಥಿಗಳ ಅಶಾಂತಿಕೆ ಹೆಚ್ಚುತ್ತಿರುವದರಿಂದ ವಿಶ್ವವಿದ್ಯಾಲಯಗಳು ಶಂತಿಶ್ಯಾಲದ ರಜಾಕ್ಕಾಗಿ ಮುಚ್ಚಲ್ಪಟ್ಟವು.

ಡಾರಾಎಸಲಾಂ — ಜಾಂಜಿಬಾರಿನ ಮಸೀದಿಗೆ ಯಾರೋ ಒಬ್ಬ ನುಗ್ಗಿ ಮಸೀದಿಯಲ್ಲಿ ರಾಜಕೀಯ ಗೋಷ್ಠಿ ನಡೆಸುವುದನ್ನು ನಿಂದಿಸಿ, ಗುಂಡುಹಾರಿಸಿ 4 ದಿಯನ್ನು ಕೊಂದನು.

ಕರಾಚಿ — ಪಾಕಿಸ್ತಾನದ ಪ್ರಜಾ ಪ್ರಭುತ್ವವು ಅಪಾಯದಲ್ಲಿರುವುದರಿಂದ ತಾವು ಅಯೂಬ ಖಾನರ ವಿರೋಧವಾಗಿ ಅಧ್ಯಕ್ಷ ಪದವಿಗೆ ಸ್ಪರ್ಧಿಸುತ್ತಿರುವುದಾಗಿ 70 ವರ್ಷದ ಫಾತಿಮಾ ಜಿನ್ನಾರು ಭಾರಿ ಸಭೆಯಲ್ಲಿ ಹೇಳಿದರು.

ನವದೆಹಲಿ — ಮತ್ತು ಮತ್ತು ಒಳ್ಳೇ ನೀತಿ ಮೂಲಕ ವಿಶ್ವಶಾಂತಿಗೆ ಒತ್ತಾಸೆ ಕೊಡಲು ದೆಹಲಿಯಲ್ಲಿ ವಿಶ್ವ ಮತಗಳ ಸಮ್ಮೇಳನವು ಬರುವ ಫೆಬ್ರವರಿ 26 ರಿಂದ ಮೂರು ದಿನಗಳು ನಡೆಯುವುದು

ಬೆಂಗಳೂರು — ಹೊಸ ಕರಗುಪೇಟೆಯಲ್ಲಿ 86 ಚೀಲ ಗೋಧಿ ಪದಾರ್ಥಗಳನ್ನು ಸಿಐಡಿಯವರು ವಶಪಡಿಸಿಕೊಂಡರು

ರೈಲ್ವೆ ವ್ಯವಸ್ಥೆ

ದಕ್ಷಿಣ ರೈಲ್ವೆಯ ಡಿವಿಜನಲ್ ಸೂಪರ್‌ಟೆಂಡೆಂಟರಾದ ಶ್ರೀ ವಿ ಕೆ ಸ್ವಾಮಿನಾಥಂರವರು ಈ ದಿನ ಪತ್ರಿಕಾ ಸಂದರ್ಶನದಲ್ಲಿ ಘೋಷಿಸುತ್ತಾ, ದಸರಾ ಕಾಲದಲ್ಲಿ ರೈಲ್ವೆ ವ್ಯವಸ್ಥೆ ಕುರಿತು ತಿಳಿಸಿದರು

ದಸರಾ ಕಾಲದಲ್ಲಿ ಬೆಂಗಳೂರಿನಿಂದ ಬರುವ ರೈಲಿಗೆ ಮೊದಮೊದಲು ಐದಾರು ಬೋಗಿಗಳನ್ನು ಹೆಚ್ಚಾಗಿ ಹಾಕುವುದಾಗಿಯೂ ಅನಂತರ ದಿನಕ್ಕೆ 10 ವಿಶೇಷ ರೈಲುಗಳು ಬಿಡಲ್ಪಡುವುದಾಗಿಯೂ ಅವರು ನುಡಿದರು ಕಳೆದ ವರ್ಷ 1-61 ಲಕ್ಷ ಟಿಕೆಟ್ಟುಗಳು ಮೈಸೂರು ರೈಲ್ವೆ ನಿಲ್ದಾಣದಲ್ಲಿ ಸಂಗ್ರಹವಾಗಿವೆ

★

ಬೆಂಗಳೂರು- ಕಾರ್ಪೊರೇಷನ್ ಚುನಾವಣೆ ಡಿಲಿಮಿಟೇಷನ್ ಸಂಬಂಧದ ಸರಕಾರದ ಡ್ರಾಫ್ಟ್ ನೋಟಿಫಿಕೇಷನ್ನನ್ನು ತೀವ್ರವಾಗಿ ವಿರೋಧಿಸಿದರು.

ಹೈದರಾಬಾದು — ತಾವೂ ಮತ್ತು ರಾಜಾಜಿ ಕಾಂಗ್ರೆಸ್ಸನ್ನು ಸೇರುವರೆಂಬ ಸುದ್ದಿ ನಿರಾಧಾರವೆಂದು ರಂಗಾರವರು ಹೇಳಿದರು.

ಬೆಂಗಳೂರು — ಸಿನೋಟ್ರಾಫನ್ನು ತೆಗೆದುಹಾಕಲು ಹೋದ ಕನ್ನಡಪರ ಚಳವಳಿಗಾರ ಮೇಲೆ ಪೋಲೀಸರು ಲಾಠಿ ಚಾರ್ಜು ಮಾಡಿದ್ದನ್ನು ಖಂಡಿಸಿದ ಒಂದು ತರ್ಕ ನಿರ್ಣಯವನ್ನು ಮೊನ್ನೆ ಕಾಫ್ಫೀ ಹೌಸ್ ಅಸೋಸಿಯೇಷನ್ ಮೀಟಿಂಗಿನಲ್ಲಿ ಮೇಯರರು ತಿರಸ್ಕರಿಸಿದ್ದನ್ನು ಪ್ರತಿಭಟಿಸಿ 5 ಮಂದಿ ವಿರೋಧಪಕ್ಷದವರು ಸಭಾ ಪರಿತ್ಯಾಗ ಮಾಡಿದರು

ಭೂಪಾಲ್ — ಮನೇಂದ್ರಘಡಿನಲ್ಲಿ ಪೋಲೀಸು ಪಾರ್ಟಿಯನ್ನು ಎದುರಿಸಿದ ಗುಂಪಿನ ಮೇಲೆ ಗುಂಡುಹಾರಿಸಲಾಯಿತು : ಇಬ್ಬರು ಸತ್ತರು,

ನವದೆಹಲಿ — ರಷ್ಯಾದ ಏಲಿಡರಿ ನೆರವನ್ನು ಚೀಣಾ ವಿರುದ್ಧ ಉಪಯೋಗಿಲು ಏನೂ ಪ್ರತಿಬಂಧವಿಲ್ಲವೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

ವಾರ್ತಾ ವಿಶೇಷಗಳು

ನವದೆಹಲಿ — ರಷ್ಯವು ಭಾರತಕ್ಕೆ ಹೆಚ್ಚಾಗಿ 38 ಎಂಐಜಿ ಮತ್ತು 20 ಎಂಐ ಹೆಲಿಕಾಪ್ಟರನ್ನೂ, ಕೆಲವು ಹಗುರವಾದ ಟ್ಯಾಂಕನ್ನೂ ಸರಬರಾಜು ಮಾಡಲು ಒಪ್ಪಿದೆ ; ಇದರ ಬೆಲೆ ರೂಪಾಯಿಗಳಿಂದ ಪಾವತಿಯಾಗಬೇಕಿದ್ದು

★

ನವದೆಹಲಿ — ಆಹಾರ ದುಸ್ಥಿತಿಯು ಲ್ಲವೆಂದೂ, ಬರ ಪೀಡಿತ ಸುಗ್ಗಿಯಲ್ಲಿ ಆಗಾಧ ಆಕ್ಕಿ ಬೆಳೆ ಆಗುವುದೆಂದೂ, ಆ ಕೊಯ್ಲಿನಲ್ಲಿ 7 ಲಕ್ಷ ಟನ್ನು ಗೋಧಿ ಆಮದು ಕಾರ್ಯವಿದೆಯೆಂದೂ ಆಹಾರ ಮಂತ್ರಿ ಶ್ರೀ ಸಬ್ರಹ್ಮಣ್ಯಂ ರಾಜ್ಯಸಭೆಯಲ್ಲಿ ತಿಳಿಸಿದರು

★

ಲಂಡನ್ — ಭಾರತ ಹೈ ಕಮಿಷನರ ಆಫೀಸಿನಲ್ಲಿ ರಾಷ್ಟ್ರಾಧ್ಯಕ್ಷ ಡಾ || ರಾಧಾಕೃಷ್ಣನ್ನರು ಬ್ರಿಟಿಷ್ ಪ್ರಧಾನಿ ಮಿ || ಹೋವರೊಂದಿಗೆ ಮೊನ್ನೆ ಭೋಜನ ಮಾಡಿದರು.

★

ಮೈಸೂರು — ಈಗ ಕಂಡಹಿಡಿಯುತ್ತಿರುವ ಹೊಸ ರೇಷ್ಮೆ ಹುಳುಗೂಡಿನಿಂದ 850 ಗಜ ರೇಷ್ಮೆ ದೊರೆಯುವುದು

★

ನವದೆಹಲಿ — ಜನಪ್ರಿಯ ವ್ಯಾಪಾರ ಕೇಂದ್ರವಾದ ಕನಾಟ ಪ್ಲೇಸಿನಲ್ಲಿ ಫಲಹಾರಾಂಕ್ಷಿಗಳಿಂದಿಂದಲ್ಲಿ ಕಾಫೀ ಕಪ್ಪಿಗೆ 48 ಪೈಸೆಯಿದ್ದಿದ್ದನ್ನು 5 ಪೈಸೆ ಹೆಚ್ಚಿಸಿದ್ದಕ್ಕೆ ಗಿರಾಕಿಗಳು ಬಹಿಷ್ಕರಿಸಿದ್ದಾರೆ — ಕೆಲವರು ಪಿಕೆಟ್ ಮಾಡುತ್ತಿದ್ದಾರೆ.

★

ಬೆಂಗಳೂರು — ಬೆಂಗಳೂರಿನಲ್ಲಿ ಅಕ್ಕಿ ಕೆಲವು ದಿನಗಳಿಗೆ ಮಾತ್ರ ಆಗುವಷ್ಟಿದ್ದು ಗೋಧಿ ದಾಸ್ತಾನುಗಳು ಖಾಲಿಗೊಂಡು ಅಳುತ್ತಿವೆಯೆಂದೂ, ಅಂಗಡಿಗಳನ್ನು ಮುಚ್ಚುವುದಾಗಿಯೂ ಸಂಕಾಂವನ್ನು ವರ್ತಕರು ಎಚ್ಚರಿಸಿದ್ದಾರೆ.

ವರ್ಣಾಶ್ರಮಧರ್ಮ

(ಮುಂದುವರಿದದ್ದು)

ಬೇರೆ ಜಾತಿಗಳಲ್ಲಿ ಮುಕ್ತಿಗೆ ಒಂದು ಮಾರ್ಗವನ್ನು ಮಾತ್ರ ಕಲ್ಪಿಸಿದೆ ; ಆದರೆ ಸನಾತನಧರ್ಮದಲ್ಲಿ ಅನೇಕ ರೀತಿಯ ಮಾರ್ಗಗಳಿವೆ ; ಅವುಗಳಲ್ಲಿ ತನಗೆ ಹೊಂದಬಹುದಾದ ಮಾರ್ಗವನ್ನು ಹಿಡಿದು ಮುಕ್ತಿಯನ್ನು ಹೊಂದಬಹುದು ; ಇತರ ಜಾತಿಗಳಂತೆ ಸನಾತನಧರ್ಮವು ಮೂಢನಂಬಿಕೆಯನ್ನು ಅವಲಂಬಿಸಿಲ್ಲ ; ತಾರ್ಕಿಕವಾದ ವಿಚಾರವಂಥನದಿಂದ ಪ್ರತಿಯೊಂದಕ್ಕೂ ಸರಿಯಾದ ಜವಾಬನ್ನು ಕೊಡಲು ಸಿದ್ಧವಾಗಿರುತ್ತೆ ; ಇತರ ಮತಸಂಸ್ಥಾಪಕರು ತಾವು ಬೋಧೆ ಮಾಡುವುದಕ್ಕೆ ಮುಂಚೆ ಭಾರತಕ್ಕೆ ಬಂದಿದ್ದು ಅಪಾರವಾದ ಮತದ ಸಾರವನ್ನು ತಿಳಿದುಕೊಂಡಿದ್ದಾರೆಂಬುದಕ್ಕೆ ಆಧಾರವಿದೆ

ವರ್ಣಾಶ್ರಮಧರ್ಮದ ಪ್ರತಿಯೊಂದು ಕರ್ಮದಲ್ಲಿಯೂ, ಇತರ ಜಾತಿಯವರಿಗೆ ಮಾರ್ಗದರ್ಶಕವಾದ ಅನೇಕ ಪಾಠಗಳಿವೆ ; ಪ್ರತಿಯೊಂದು ಕರ್ಮದಲ್ಲಿಯೂ ಅವಂವರಿಗೆ ಕ್ಷುಷ್ಯವಾದ ಕೆಲಸಗಳು : ನಾಯಿಂದ, ಮಡಿವಾಳ, ಹೂವಾಡಿಗ, ವಾದ್ಯಗಾರ, ಕುಂಬಾರ, ಗೋಪಾಲ ಇವರುಗಳಿಗೆ ವಿಧಾಯಕವಾಗಿರುತ್ತೆ ; ಶಾಸ್ತ್ರಗಳಂತೆ ಇವಂಲ್ಲಿ ಯಾವುದನ್ನು ಬಿಟ್ಟರೂ ಕರ್ಮಲೋಪವುಂಟಾಗುತ್ತದೆ : ಅಂದರೆ ಯಾವ ಕೆಲಸವಾದರೂ ಹಿಂದೂ ಸಮಾಜದ ಪ್ರತಿಯೊಂದು ಭಾಗವೂ ಸೇರಿರಲೇಬೇಕೆಂದು ಅರ್ಥ. ಬ್ರಾಹ್ಮಣನು ಪೂಜೆಮಾಡದೇ ಇದ್ದಲ್ಲಿ ಯಾವರೀತಿ ಕರ್ಮಲೋಪವುಂಟಾಗುತ್ತದೋ, ಅದೇರೀತಿ ನಾಯಿಂದನು ಕ್ಷೌರಮಾಡದೇ ಇದ್ದರೆ, ಮಡಿವಾಳನು ಒಟ್ಟೆ ಒಗಯದೇ ಇದ್ದರೆ, ಕುಂಬಾರನಿಂದ ಮಡಕೆ ಪಡೆಯದಿದ್ದರೆ ಕರ್ಮಲೋಪವುಂಟಾಗುತ್ತದೆ : ಸಮಾಜದ ಪ್ರತಿಯೊಂದು ಭಾಗದ ಜನರೂ ಸೇರಿದರೇನೇ ಕರ್ಮವು ಪೂರ್ತಿಆಗುತ್ತದೆ. ಉಪನಯನ ಕರ್ಮದಲ್ಲಿ ಆಚಾರ್ಯನು ನಾಯಿಂದನನ್ನು ಬ್ರಹ್ಮನೆಂದು ಭಾವಿಸಿ ಅದೇರೀತಿ ಸಂಭೋಧಿಸಬೇಕು : ವೈಶ್ಯೋತ್ಪರ್ಗಶಾಸ್ತ್ರದಲ್ಲಿ ಯಜಮಾನನು ಮಂತ್ರವನ್ನು ಅವಶ್ಯ ಪಠಿಸಲೇಬೇಕು ; ಅದರಲ್ಲಿ ಕಮ್ಮಾರ, ಕುಂಬಾರ, ಬಡಗಿ ಮತ್ತು ಎಲ್ಲಾ ಕೈಕಸಬಿನ ಮತ್ತು ಇತರ ಜನರನ್ನೂ ಕೂಡ ಭಗವಂತನ ಅಂಶವೆಂದೇ ತಿಳಿದು ಸ್ತೋತ್ರಮಾಡಬೇಕು.

Truth ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಶ್ರೀ ಪ್ರೊಫೆಸರ್ ಎಂ.ವೀರೇಂದ್ರಕುಮಾರ್ ಸಿದ್ಧಾಂತಶಾಸ್ತ್ರ M. A., P. R. S. ಅವರ 'ಪ್ರಾಚೀನ ಭಾರತೀಯ ಸಂಸ್ಕೃತಿ' ಎಂಬ ಲೇಖನದಿಂದ ಸಂಗ್ರಹಿಸಲ್ಪಟ್ಟಿದೆ.

ಆ. ಸ. ಅಯ್ಯಂಗಾರ್, ಹೊಂಗೂರು.



ಗೋರಕ್ಷಣೆ ಪ್ರಾಣದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

Advertise in

The Oldest Newspaper in the State

Sri 'SATYAVADI' Daily

Cmarajapuram, Mysore 4

ವುಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ

.... ಎ. ವಿ ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ತಾರಾಗಣ– ಅಶೋಕಕುಮಾರ್, ವೈಜಯಂತಿಮಾಲಾ, ನಿಮ್ಮಿ, ಧರ್ಮೇಂದರ್, ಪ್ರಾಣ್

[ದಿನವಹಿ 3 ಪ್ರದರ್ಶನಗಳು]

ಅಪೆರಾ— 18–9–64 ರಿಂದ

ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]

ಫೋನ್ ಮಾಸ್ತರ್

ತಾ ಯ

ಶಾಶ್ರೀ– ವಂದನಾ, ಪಾಪಮ್ಮ, ಈಶ್ವರಪ್ಪ, ಶಿವರಾಜ್, ಶಿವಶಂಕರ್, ಬಾಲಕೃಷ್ಣ

SHAKTI SUDHA

Superb Tonic

Help The ' Gorakshana'

"ಗೋರಕ್ಷಣ" ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ.

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಾರ್ಷಿಕ ಚಂದಾ 50 ನ ಪೈ

ಅಭಿವಾನಿಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ)

ವಿಳಾಸ– ಗೋರಕ್ಷಣ ಆಫೀಸು ಚಾಮರಾಪುರಂ, ಮೈಸೂರು 4

ಚಂದಾ ವಾಯಿದೆ ಮುಗಿದಿರುವವರು ದಯವಾಡಿ ಪಾವತಿ ಮಾಡಬೇಕಾಗಿ ವಿನಂತಿ ; ಅಭಿವಾನಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ನೆರವು ನೀಡಿ ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲು ಸಹಕರಿಸಬೇಕೆಂದು ವಿನಂತಿ ; ಇವರ ಹೆಸರು ಆಗಾಗ್ಗೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4